**<u>ಸಾಕ್ಷಿಯನ್ನು ದಿನಾಂಕ 17.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ವಿ ವಿ ವಕೀಲರಿಂದಃ</u>**

1. ಪ್ರತಿವಾದಿ ನನಗೆ ಸೇರಿದ ಜಾಗದಲ್ಲಿ ಮನೆ ಕಟ್ಟಲು ಬಂದಿದ್ದರಿಂದ ನಾನು ಈ ದಾವೆ ದಾಖಲಿಸಿದ್ದೇನೆ. ಇದೇ ದಾವಾ ಸ್ವತ್ತಿನ ಸಂಬಂಧವಾಗಿ ಈ ಹಿಂದೆಯೂ ನಾನು ಪ್ರತಿವಾದಿಯ ವಿರುದ್ಧ 2 ಕೇಸು ದಾಖಲಿಸಿದ್ದೆನು. ಸದರಿ ದಾವೆ ವಜಾ ಆಗಿದೆ. ವಜಾ ಆದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೆ ಮತ್ತು ಅದು ಸಹ ವಜಾ ಆಗಿದೆ. ಸದರಿ ಎರಡೂ ದಾವೆಗಳನ್ನು ಯಾವ ಉದ್ದೇಶಕ್ಕೆ ದಾಖಲಿಸಿದ್ದೆ ಎಂದು ನನಗೆ ನೆನಪಿಲ್ಲ. ಸಾಕ್ಷಿ ಪುನಃ ಪ್ರತಿವಾದಿಯ ವಿರುದ್ಧ ಈ ಹಿಂದೆ ಒಂದು ದಾವೆ ಮತ್ತು ಅದರಲ್ಲಿ ಆದ ತೀರ್ಪಿನ ವಿರುದ್ಧ ಒಂದು ಮೇಲ್ಮನವಿ ಮಾತ್ರ ಸಲ್ಲಿಸಿದ್ದೆ ಎನ್ನುತ್ತಾರೆ.
2. ನಾನು ಪ್ರತಿವಾದಿಯ ವಿರುದ್ಧ ಈ ಹಿಂದೆ ಸಲ್ಲಿಸಿದ ದಾವೆಯ ಸಂಖ್ಯೆ ಅಸಲು ದಾವಾ ಸಂಖ್ಯೆ 62/2022 ಎಂದರೆ ಸರಿ. ಪ್ರತಿವಾದಿ ನನ್ನ ಜಾಗಕ್ಕೆ ಅತಿಕ್ರಮವಾಗಿ ಪ್ರವೇಶಿಸಿ ತೊಂದರೆ ಕೊಡುತ್ತಿದ್ದಾನೆಂಬ ಕಾರಣಕ್ಕೆ ಶಾಶ್ವತ ನಿರ್ಭಂಧಕಾಜ್ಞೆಗಾಗಿ ಸದರಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಪ್ರಸ್ತುತ ಈ ದಾವೆಯ ದಾವಾ ಸ್ವತ್ತಿನ ಸಂಬಂಧವೇ ಮೇಲೆ ಹೇಳಿದ ದಾವೆಯನ್ನು ದಾಖಲಿಸಲಾಗಿದೆ ಎಂದರೆ ಸರಿ.
3. ನನಗೆ ಸೇರಿದ ಸೈಟ್ ನಂಬರ್ 117 ರ ಪೂರ್ವ ದಿಕ್ಕಿಗೆ ನನ್ನ ಹೆಂಡತಿ ಭಾಗ್ಯಮ್ಮಳ ಹೆಸರಿಗೆ ಇರುವ ಸೈಟ್ ನಂಃ 116 ಇದೆ. ನಿಪಿ–1 ರ ಕ್ರಯ ಪತ್ರದ ಪ್ರಕಾರ ನಾನು ಖರೀದಿ ಮಾಡಿದ ನಿವೇಶನದ ಪೂರ್ವಕ್ಕೂ ಸೈಟ್ ನಂಃ 116 ಇದೆ. ಪಶ್ಚಿಮಕ್ಕೆ ಸರ್ವೆ ನಂಬರ್ 92 ರ ಗಡಿ

ಇದೆ. ಉತ್ತರಕ್ಕೆ ರಸ್ತೆ ಇದೆ ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 118 ರಲ್ಲಿರುವ ಮಾಂಸದ ಅಂಗಡಿ ಇದೆ. ನಿವೇಶನ ಸಂಖ್ಯೆ 118 ರಲ್ಲಿ ಇದೆ ಎಂದು ನಾನು ಹೇಳುತ್ತಿರುವ ಮಾಂಸದ ಅಂಗಡಿ ನನ್ನ ಹೆಂಡತಿ ಭಾಗ್ಯರವರ ಹೆಸರಿಗೆ ಇದೆ. ಪ್ರತಿವಾದಿಯ ಜಾಗ ನಿವೇಶನ ಸಂಖ್ಯೆ 118 ರಲ್ಲಿದೆ. ಸದರಿ ನಿವೇಶನ ದಾವಾ ನಿವೇಶನದ ದಕ್ಷಿಣ ದಿಕ್ಕಿಗೆ ಇದೆ. ನಿವೇಶನ ಸಂಖ್ಯೆ 118 ನಮಗೆ ಸೇರಿದ್ದು, ಅದನ್ನು ಪ್ರತಿವಾದಿ ಒತ್ತುವರಿ ಮಾಡಿ ಸ್ವಾಧೀನದಲ್ಲಿದ್ದಾರೆ. ಪ್ರತಿವಾದಿ ನಿವೇಶನ ಸಂಖ್ಯೆ 118 ರಲ್ಲಿ ಒಟ್ಟು ಅಂದಾಜು 20 ಅಡಿ ಒತ್ತುವರಿ ಮಾಡಿದ್ದಾರೆ. ನಿವೇಶನ ಸಂಖ್ಯೆ 118 ನ್ನು ಪ್ರತಿವಾದಿ ಒತ್ತುವರಿ ಮಾಡಿರುವ ಸಂಬಂಧ ಅವರ ವಿರುದ್ಧ ದಾವೆ ಹಾಕಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಲೋಕಾಯುಕ್ತರಿಗೆ ದೂರು ಕೊಟ್ಟಿದ್ದೇನೆ ಎನ್ನುತ್ತಾರೆ. ಪ್ರತಿವಾದಿ ನಿವೇಶನ ಸಂಖ್ಯೆ 118 ನ್ನು ಒತ್ತುವರಿ ಮಾಡಿದ್ದಾರೆಂದು ತೋರಿಸುವ ದಾಖಲೆಯನ್ನು ಈ ದಾವೆಯಲ್ಲಿ ಕೊಟ್ಟಿಲ್ಲ. ಸಾಕ್ಷಿ ಪುನಃ ನಾನು ಈ ದಾವೆಯನ್ನು ನಿವೇಶನ ಸಂಖ್ಯೆ 117 ರ ಸಂಬಂಧ ಮಾತ್ರ ಸಲ್ಲಿಸಿದ್ದೇನೆ ಎನ್ನುತ್ತಾರೆ.

4. ನಿವೇಶನ ಸಂಖ್ಯೆ 118 ರ ನಿವೇಶನವನ್ನು ನನ್ನ ಹೆಂಡತಿ ಹೆಸರಿಗೆ ಖರೀದಿಸಿದ ಸಂಬಂಧ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಿಮ್ಮ ಪ್ರಕಾರ ಪ್ರತಿವಾದಿ ನಿವೇಶನ ಸಂಖ್ಯೆ 118 ನ್ನು ಮಾತ್ರ ಒತ್ತುವರಿ ಮಾಡಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಿವೇಶನ ಸಂಖ್ಯೆ 118 ಮತ್ತು ದಾವಾ ಸ್ವತ್ತಾದ ನಿವೇಶನ ಸಂಖ್ಯೆ 117 ನ್ನು ಒತ್ತುವರಿ ಮಾಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ದಾವಾ ಸ್ವತ್ತನ್ನು ಸಂಪೂರ್ಣ ಒತ್ತುವರಿ ಮಾಡಿದ್ದಾರೆ. ಸಾಕ್ಷಿ ಪುನಃ ಉತ್ತರಕ್ಕೆ 10 ಅಡಿ ಕನ್ಸರ್ ವೆನ್ಸಿ ಎಂದು ಜಾಗ ಬಿಟ್ಟು ಉಳಿದ ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಸಂಪೂರ್ಣ ಮನೆ ಕಟ್ಟಿದ್ದಾರೆ ಎನ್ನುತ್ತಾರೆ.

5. ನನಗೆ ಸೇರಿದ ದಾವಾ ನಿವೇಶನದ ಒಟ್ಟು ವಿಸ್ತೀರ್ಣ 25 x 30 ಅಡಿ. ಸದರಿ ಸದರಿ ಸ್ವತ್ತಿನಲ್ಲಿ ಯಾವುದೇ ಕನ್ಸರ್ ವೆನ್ಸಿ ಜಾಗ ಇಲ್ಲ. ದಾವಾ ನಿವೇಶನ ಸಂಖ್ಯೆ 117 ರ ಉತ್ತರಕ್ಕೆ ನಗರ ಸಭೆಗೆ ಸೇರಿದ 20 ಅಡಿ ರಸ್ತೆ ಇದೆ. ನಾನು ಮೇಲೆ ಹೇಳಿದ ಚಕ್ಕುಬಂಧಿಗೆ ಒಳಪಟ್ಟು ದಾವಾ ನಿವೇಶನ ಇದೆ.

6. ದಾವಾ ನಿವೇಶನವನ್ನು ನಾನು ಅಫ್ರೋಜ್ ಎಂಬುವವರಿಂದ ಖರೀದಿ ಮಾಡಿದ್ದೆನು. ಅಫ್ರೋಜ್ ರವರಿಗೆ ದಾವಾ ನಿವೇಶನ ಅವರ ತಂದೆಯಿಂದ ಬಂದಿತ್ತು. ನಿಪಿ-1 ರ ಕ್ರಯ ಪತ್ರದ ಪ್ರಕಾರ ದಾವಾ ನಿವೇಶನದ ಪೂರ್ವಕ್ಕೆ ನಿವೇಶನ ಸಂಖ್ಯೆ 116, ಪಶ್ಚಿಮಕ್ಕೆ ಕನ್ಸರ್ ವೆನ್ಸಿ ನಂತರ ಬೇರೆಯವರ ಸ್ವತ್ತು, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಮಾಂಸದ ಅಂಗಡಿ ಇದೆ ಎಂದರೆ ಸರಿ. ಸಾಕ್ಷಿ ಪುನಃ ದಕ್ಷಿಣಕ್ಕೆ ನಿವೇಶನ ಸಂಖ್ಯೆ 118 ರಲ್ಲಿರುವ ಮಾಂಸದ ಅಂಗಡಿ ಇದೆ ಎನ್ನುತ್ತಾರೆ. ದಾವಾ ನಿವೇಶನವನ್ನು ನಾನು ಖರೀದಿ ಮಾಡುವ ಮೊದಲೇ ಅದರ ದಕ್ಷಿಣ ದಿಕ್ಕಿಗೆ ಇರುವ ನಿವೇಶನ ಸಂಖ್ಯೆ 118 ರಲ್ಲಿ ಪ್ರತಿವಾದಿಯ ಮಾಂಸದ ಅಂಗಡಿ ಇತ್ತು ಎಂದರೆ ಸರಿ. ಪ್ರತಿವಾದಿ ಸದರಿ ಮಾಂಸದ ಅಂಗಡಿಯನ್ನು ಎಷ್ಟು ವರ್ಷಗಳಿಂದ ನಡೆಸುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ನಿವೇಶನವನ್ನು ನಾನು ಖರೀದಿ ಮಾಡಿ 13 ವರ್ಷವಾಯಿತು. ಕಳೆದ 13 ವರ್ಷಗಳಿಂದಲೂ ನಿವೇಶನ ಸಂಖ್ಯೆ 118 ರಲ್ಲಿ ಪ್ರತಿವಾದಿಯ ಮಾಂಸದ ಅಂಗಡಿ ಇದೆ. ಸಾಕ್ಷಿ ಪುನಃ ಸದರಿ ಮಾಂಸದ ಅಂಗಡಿ ನನ್ನ ಹೆಂಡತಿಯದ್ದು ಎನ್ನುತ್ತಾರೆ. ಸದರಿ ಮಾಂಸದ ಅಂಗಡಿಗೆ ಯಾವುದೇ ಹೆಸರಿಟ್ಟಿಲ್ಲ. ಸದರಿ ಅಂಗಡಿಯನ್ನು ಮೊದಲು ನನ್ನ ಹೆಂಡತಿ ನಡೆಸುತ್ತಿದ್ದರು ಮತ್ತು ಈಗ ಖಾಲಿ ಇದೆ. ಸದರಿ ಅಂಗಡಿ ಕಳೆದ 4-5 ವರ್ಷಗಳಿಂದ ಖಾಲಿ ಇದೆ.

ನಿವೇಶನ ಸಂಖ್ಯೆ 118 ಒಟ್ಟು 30 x 40 ಅಡಿ ವಿಸ್ತೀರ್ಣ ಇದೆ. ನಿವೇಶನ ಸಂಖ್ಯೆ 118 ರ ದಕ್ಷಿಣ ದಿಕ್ಕಿಗೆ ಮಾಂಸದ ಅಂಗಡಿ ಇದೆ. ಸದರಿ ಅಂಗಡಿ 20 x 20 ಅಡಿ ವಿಸ್ತೀರ್ಣ ಇದೆ. ಸದರಿ ನಿವೇಶನವನ್ನು ನನ್ನ ಹೆಂಡತಿ ಹೆಸರಿಗೆ ಜಯಶ್ರೀ ಎಂಬುವವರಿಂದ 2010 ರಲ್ಲಿ ಖರೀದಿ ಮಾಡಲಾಗಿತ್ತು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇಲ್ಲ. ಸದರಿ ನಿವೇಶನದ ಖಾತೆ–ಕಂದಾಯ ದಾಖಲೆಗಳು ನನ್ನ ಹೆಂಡತಿಯ ಹೆಸರಿಗಿದೆ. ಮಾಂಸದ ಅಂಗಡಿ ನಡೆಸಲು ನನ್ನ ಹೆಂಡತಿ ಪರವಾನಿಗೆ ಪಡೆದಿದ್ದಾಳೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ 118 ನ್ನು ನನ್ನ ಹೆಂಡತಿಯ ಹೆಸರಿಗೆ ಖರೀದಿಸಲಾಗಿತ್ತು ಮತ್ತು ಅದರ ದಾಖಲೆ ಆಕೆಯ ಹೆಸರಿಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ನಿವೇಶನದಲ್ಲಿ ನನ್ನ ಹೆಂಡತಿ ಸ್ವಾಧೀನದಲ್ಲಿಲ್ಲ ಮತ್ತು ಅದರಲ್ಲಿ ಯಾವುದೇ ಮಾಂಸದ ಅಂಗಡಿ ನಡೆಸುತ್ತಿಲ್ಲ ಎನ್ನುವುದು ಸರಿಯಲ್ಲ.

7. ನಿಪಿ–1 ರ ಕ್ರಯ ಪತ್ರ ಮಾಡಿಕೊಳ್ಳಲಾದ ಕಾಲಕ್ಕೆ ದಾವಾ ಷೆಡ್ಯೂಲ್ ನಿವೇಶನ ಸಂಖ್ಯೆ 117 ಅಸ್ತಿತ್ವದಲ್ಲಿರಲಿಲ್ಲ ಎನ್ನುವುದು ಸರಿಯಲ್ಲ. ದಾಖಲೆಯಲ್ಲಿ ಮಾತ್ರ ಸದರಿ ಸ್ವತ್ತು ಅಸ್ತಿತ್ವದಲ್ಲಿದೆ ಎಂದು ಕಾಣಿಸಲಾಗಿದ್ದು, ಅದರ ಉತ್ತರ ದಿಕ್ಕಿಗೆ ಯಾವುದೇ ರಸ್ತೆ ಇಲ್ಲ ಎನ್ನುವುದು ಸರಿಯಲ್ಲ. ನಿವೇಶನ ಸಂಖ್ಯೆ 117 ರ ಉತ್ತರ ದಿಕ್ಕಿಗೆ ನನ್ನ ಮನೆಯ ಗೋಡೆ ಇದ್ದು, ರಸ್ತೆ ಇಲ್ಲ ಎನ್ನುವುದು ಸರಿಯಲ್ಲ. ಸದರಿ ವಿಚಾರ ಮುಚ್ಚಿಟ್ಟು ಸುಳ್ಳು ದಾವೆ ಹಾಕಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತು ಇರುವ ಪ್ರದೇಶದಲ್ಲಿ 30 x 40 ಅಡಿ ವಿಸ್ತೀರ್ಣದ ಯಾವುದೇ ನಿವೇಶನ ಇಲ್ಲ ಎನ್ನುವುದು ಸರಿಯಲ್ಲ. ನಿವೇಶನ ಸಂಖ್ಯೆ 118 ರಲ್ಲಿ 30 ಅಡಿ ಅಗಲದ ನಿವೇಶನ ಇಲ್ಲ ಎನ್ನುವುದು ಸರಿಯಲ್ಲ.

8. ದಾವಾ ನಿವೇಶನ ಸಂಖ್ಯೆ 117 ಉತ್ತರ–ದಕ್ಷಿಣಕ್ಕೆ 30 ಅಡಿ ಮತ್ತು ಪೂರ್ವ– ಪಶ್ಚಿಮಕ್ಕೆ 20 ಅಡಿ ವಿಸ್ತೀರ್ಣ ಇದೆ. 30 ಅಡಿ ಅಗಲದ ಯಾವುದೇ ನಿವೇಶನ ಅಸ್ತಿತ್ವದಲ್ಲಿಲ್ಲ ಎನ್ನುವುದು ಸರಿಯಲ್ಲ. ನಾನು ಹೇಳಿದ ಅಳತೆ ಮತ್ತು ಚಕ್ಕುಬಂಧಿಗೆ ಒಳಪಟ್ಟ ಯಾವುದೇ ನಿವೇಶನ ಅಸ್ತಿತ್ವದಲ್ಲಿಲ್ಲದಿದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಲಾಗಿದೆ ಎನ್ನುವುದು ಸರಿಯಲ್ಲ. ನಾನು ಹೇಳಿದ ಅಳತೆ ಮತ್ತು ಚಕ್ಕುಬಂಧಿಗೆ ಒಳಪಟ್ಟಿರುವ ನಿವೇಶನದಲ್ಲಿ ನಾನು ಯಾವುದೇ ಸ್ವಾಧೀನದಲ್ಲಿಲ್ಲ ಎನ್ನುವುದು ಸರಿಯಲ್ಲ.

9. ಕಳೆದ 30 ವರ್ಷಗಳಿಂದ ಪ್ರತಿವಾದಿ ಮತ್ತು ಅವರ ಕುಟುಂಬದವರು ಶಿವಾಜಿ ಮಟನ್ ಸ್ಟಾಲ್ ಎಂಬ ಹೆಸರಿನಲ್ಲಿ ಮಾಂಸದ ಅಂಗಡಿ ನಡೆಸುತ್ತಿದ್ದಾರೆ ಮತ್ತು ಸದರಿ ಅಂಗಡಿ ನಿಪಿ–1 ರ ಕ್ರಯಪತ್ರದಡಿ ನಾನು ಖರೀದಿಸಿದೆ ಎನ್ನಲಾದ ನಿವೇಶನ ಮುಂಭಾಗದಲ್ಲಿದೆ ಎನ್ನುವುದು ಸುಳ್ಳು. ಮಾಂಸ ಅಂಗಡಿ ನಡೆಸಲು 2007–2008 ರಲ್ಲಿ ಪ್ರತಿವಾದಿ ಪರವಾನಿಗೆಯನ್ನು ಪಡೆದುಕೊಂಡಿದ್ದರು ಎನ್ನುವುದು ಸುಳ್ಳು. ಪ್ರತಿವಾದಿ ಈಗಲೂ ಸದರಿ ಅಂಗಡಿಯನ್ನು ನಗರ ಸಭೆಯಿಂದ ಪರವಾನಿಗೆ ಪಡೆದು ನಡೆಸುತ್ತಿದ್ದಾರೆ ಎನ್ನುವುದು ಸರಿಯಲ್ಲ. ಸದರಿ ಅಂಗಡಿಗೆ ಸಂಬಂಧಪಟ್ಟ ವಿದ್ಯುತ್ ಬಿಲ್ಲು ಪ್ರತಿವಾದಿಯ ಹೆಸರಿಗಿದೆ ಎನ್ನುವುದು ಸುಳ್ಳು. ಸದರಿ ಅಂಗಡಿಗೆ ಸಂಬಂಧಪಟ್ಟ ಇ–ಸ್ವತ್ತು ದಾಖಲೆ ಪ್ರತಿವಾದಿಯ ಹೆಸರಿಗಿದೆ ಎನ್ನುವುದು ಸುಳ್ಳು. ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಮಾಹಿತಿ ನೀಡಿ, ದಾವೆ ಸಲ್ಲಿಸಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

10. ಈಗ ನನಗೆ ತೋರಿಸಲಾದ ಪೋಟೋದಲ್ಲಿ ಕಾಣುವ ಶಿವಾಜಿ ಮಟನ್ ಸ್ಟಾಲ್ ಅಂಗಡಿ ಕಟ್ಟಡ ಎಲ್ಲಿದೆ ಎಂದರೆ ಗೊತ್ತಿಲ್ಲ. ಈಗ ನನಗೆ ತೋರಿಸಲಾದ ಮತ್ತೊಂದು

ಪೋಟೋದ ಬಲ ಅಂಚಿನಲ್ಲಿ ಕಾಣುವ ಮನೆ ನನಗೆ ಸೇರಿದೆ. ಸಾಕ್ಷಿ ಗುರುತಿಸಿದ ಪೋಟೋವನ್ನು ನಿಡಿ–1 ಎಂದು ಗುರುತಿಸಲಾಯಿತು. ನಿಡಿ–1 ರ ಪೋಟೋದಲ್ಲಿ ಕಾಣುವ ನನ್ನ ಮನೆಯ ಹಿಂಭಾಗದ ಜಾಗವು ಉತ್ತರ ದಿಕ್ಕಿನಲ್ಲಿದೆ ಎಂದರೆ ಸರಿ. ಉತ್ತರ ದಿಕ್ಕಿನಲ್ಲಿ ಯಾವುದೇ ರಸ್ತೆ ಕಾಣುತ್ತಿಲ್ಲ ಎಂದರೆ ಸರಿ. ಉತ್ತರ ದಿಕ್ಕಿನಲ್ಲಿ ಇದೆ ಎನ್ನಲಾದ ರಸ್ತೆಯನ್ನು ಮನೆಗೆ ಮತ್ತು ನಿವೇಶನಕ್ಕೆ ಓಡಾಡಲು ಸಾರ್ವಜನಿಕರು ಬಳಸುತ್ತಾರೆ. ನಿಡಿ–1 ರಲ್ಲಿ ಕಾಣುವಂತೆ ನನ್ನ ಮನೆಯ ಉತ್ತರ ದಿಕ್ಕಿಗೆ ಬಳಕೆಯಲ್ಲಿರುವ ಯಾವುದೇ ರಸ್ತೆ ಅಸ್ತಿತ್ವದಲ್ಲಿಲ್ಲ ಎನ್ನುವುದು ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಭದ್ರಾವತಿ.**

**1 ನೇ ಹೆಚ್ಚುವರಿ/ ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**